Lift Irrigation Scheme in Kolar District.

*Q.—206. **Sri E. NARAYANA GOWDA** (Bangarpet).—

Will the Government be pleased to state :—

(*a*) the Taluks in Kolar District in respect of which Lift Irrigation Scheme has been taken up with a view to grow more food and the amount provided to this District ;

(*b*) the number of open wells in respect of which the work has been started by the Public Works Department and the extent of new atchkat that could be brought under wet cultivation thereby ;

(*c*) whether in view of the recurring famine in this District, they intend to introduce this scheme permanently ?

*A.—**Sri ALUR HANUMANTHAPPA** (Deputy Minister for Minor Irrigation).—

(*a*) Nil.
(*b*) Nil.
(*c*) This will be examined.

ಶ್ರೀ ಇ. ನಾರಾಯಣ ಗೌಡ.—ಇಲ್ಲಿಗೆ ಒಂದು ವರ್ಷದ ಕೆಳಗೆ ಮಾನ್ಯ ಲೋಕೋಪಯೋಗಿ ಶಾಖಾ ಸಚಿವರೂ, ವ್ಯವಸಾಯ ಸಚಿವರೂ ಕೋಲಾರ ಜಿಲ್ಲೆಯಲ್ಲಿ ಯಾವ ಯಾವ ಸ್ಥಳದಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮ್ ಸಾಧ್ಯವಿದೆ ಎಂಬುದನ್ನು ಪರಿಶೀಲನೆ ಮಾಡುವುದಾಗಿಯೂ, ಆ ಬಗ್ಗೆ ಒಂದು ಸ್ಕೀಮನ್ನು ತಯಾರು ಮಾಡುವುದಾಗಿಯೂ ಹೇಳಿದ ವಿಚಾರ ಎಲ್ಲಿಗೆ ಬಂದಿದೆ ?

†ಶ್ರೀ ಆಲೂರು ಹನುಮಂತಪ್ಪ.—ಚಿಕ್ಕಬಳ್ಳಾಪುರದಲ್ಲಿ ಸುಮಾರು 28 ಸ್ಥಳಗಳಲ್ಲಿ ಈ ಲಿಫ ಇರಿಗೇಷನ್ ಸ್ಕೀಮಿಗೆ ಅವಕಾಶವಿರುವುದಾಗಿ ತಿಳಿದುಬಂದಿದೆ. ಆ ವಿಚಾರ ಈಗ ಸರ್ಕಾರದ ಮುಂದಿದೆ.

ಶ್ರೀ ಇ. ನಾರಾಯಣಗೌಡ.—ಲಿಫ್ಟ್ ಇರಿಗೆಷೇನ್ ಯೋಜನೆಯ ಬಗ್ಗೆ ಎಲ್ಲ ಜಿಲ್ಲೆಗಳಿಗೂ ಅನ್ವಯಿಸುವ ಹಾಗೆ ಒಂದು ಲನ್ನನ್ನು ತಯಾರಿಸುವುದಾಗಿ ತಾವು ಅಪ್ಪಣೆ ಕೊಡಿಸಿದ್ದಿರಿ, ಆ ವಿಚಾರ ಎಲ್ಲಿಗೆ ಬಂದಿದೆ ?

ಶ್ರೀ ಆಲೂರು ಹನುಮಂತಪ್ಪ.—ಇದು ಹೊಸ ಯೋಜನೆ, ಇದನ್ನು ಇಡೀ ರಾಜ್ಯದಲ್ಲಿರತಕ್ಕ ಎಲ್ಲ ಜಿಲ್ಲೆಗಳಿಗೂ ಅನ್ವಯಿಸುವ ಹಾಗೆ ನಾವೀಗ ಒಂದು ಮಾಸ್ಟರ್ ಪ್ಲಾನನ್ನು ತಯಾರು ಮಾಡುತ್ತಿದ್ದೇವೆ. ವಿದ್ಯುಚ್ಛಕ್ತಿಯ ಸರಬರಾಯಿ ನೋಡಿಕೊಂಡು ಆದಷ್ಟು ಬೇಗ ಒಂದು ತಿರ್ಮಾನಕ್ಕೆ ಬರಬೇಕೆಂದಿದ್ದೇವೆ. ಆದಷ್ಟು ಬೇಗ ಕಾರ್ಯಕ್ರಮ ಕೈಗೊಳ್ಳಲಾಗುವುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ದೇಶದಲ್ಲಿ ಆಹಾರದ ಕೊರತೆ ಇರುವಾಗ ಅದನ್ನು ನೀಗಲು ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಕೆಲಸಗಳನ್ನು ಕೈಗೊಳ್ಳಬೇಕೆಂದು ಲಸ್ಟ್ ತಯಾರು ಮಾಡಿದ್ದೀರಿ ? ಕೋಲಾರ ಜಿಲ್ಲೆಯಲ್ಲಿ ಇದನ್ನು ಪರೀಕ್ಷಾರ್ಥವಾಗಿ ನಡೆಸಲು ಇದ್ದ ತೊಂದರೆಯೇನು ?

ಶ್ರೀ ಆಲೂರು ಹನುಮಂತಪ್ಪ.—ಈ ಕಾರ್ಯವೆನ್ನು ಕೋಆಪರೇಟೀವ್ ಬೇಸಿಸ್ ಮೇಲೆ ಮಾಡಬೇಕೇ ಅಥವಾ ಇಲಾಖೆಯ ಮೂಲಕ ನಡೆಸಬೇಕೆ ಎಂಬ ಪ್ರಶ್ನೆ ಈಗ ಸರ್ಕಾರದವರ ತೀವ್ರ ಪರಿಶೀಲನೆಯಲ್ಲಿದೆ. ಜಾಗ್ರತೆಯಾಗಿ ತಿರ್ಮಾನ ತೆಗೆದುಕೊಂಡು ಇದನ್ನು ಕಾರ್ಯರೂಪಕ್ಕೆ ತರಲಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಕಾರ್ಯವನ್ನು ಕೋಆಪರೇಟೀವ್ ಬೇಸಿಸ್ ಮೇಲೆ ಮಾಡಬೇಕೆಂದಿದ್ದರೆ, ಈ ಕಾರ್ಯವನ್ನು ಯಾವ ಏಜೆನ್ಸಿಗೆ ವಹಿಸುತ್ತೀರಿ ? ಈ ಅನುಮಾನಕ್ಕೆ ಕಾರಣ ಏನು ?

ಶ್ರೀ ಆಲೂರು ಹನುಮಂತಪ್ಪ.—ಇಲ್ಲಿ ಅನುಮಾನದ ಪ್ರಶ್ನೆಯೇ ಇಲ್ಲ. ಈ ಕಾರ್ಯವನ್ನು ಕೆಲವು ಕಡೆ ಕೋ ಆಪರೇಟೀವ್ ಬೇಸಿಸ್ ಮೇಲೆ ಮಾಡುತ್ತಿರುವ ನಿದರ್ಶನಗಳಿವೆ. ವಿದ್ಯುಚ್ಛಕ್ತಿ ಸರಬರಾಯಿಯ ಅನುಕೂಲತೆ ನೋಡಿಕೊಂಡು ಆದಷ್ಟು ಬೇಗ ಕಾರ್ಯವನ್ನು ಪ್ರಾರಂಭಿಸುತ್ತೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈಗ ಕೋಲಾರದಲ್ಲಿ ನಡೆಸತಕ್ಕ ಲಿಫ್ಟ್ ಇರಿಗೇಷನ್ ಸ್ಕೀಮನ್ನು ಏಜನ್ಸಿಯ ಮೂಲಕ ಮಾಡಿಸುತ್ತಿರೋ ಅಥವಾ ಸರ್ಕಾರದವರೇ ನಡೆಸುತ್ತಾರೆಯೋ ?

ಶ್ರೀ ಆಲೂರು ಹನುಮಂತಪ್ಪ.—ಈಗ ಸರ್ಕಾರದ ಮುಂದೆ ಇನ್ನೂ ಅನೇಕ ವಿಚಾರಗಳು ಬಂದಿವೆ. ಎಕರೆಗೆ ಎಷ್ಟು ವಾಟರ್ ರೇಟ್ ತಗುಲುತ್ತದೆ, ದೇಶದ ಎಲ್ಲ ಭಾಗಕ್ಕೂ ಇದನ್ನು ಅನ್ವಯಿಸಿದರೆ ಖರ್ಚೆಷ್ಟು ಬೇಕು ಎನ್ನುತಕ್ಕ ಬಗ್ಗೆ ವಿವರಗಳನ್ನು ಎಲ್ಲ ಜಿಲ್ಲೆಗಳಿಂದಲೂ ತರಿಸಿ ಕೊಳ್ಳಲಾಗಿದೆ ನೀರಿನ ಅವಶ್ಯಕತೆ.....

Sri G. A. THIMMAPPA GOWDA.—I want to know whether the Government have taken a decision to start lift irrigation schemes.

Sri G. NARAYANA GOWDA.—It is under the active consideration of Government. We will take a decision on this matter.

ಶ್ರೀ ಕೆ. ಲಕ್ಕಪ್ಪ.—ಸರ್ಕಾರದವರು ಇಲ್ಲಿಗೆ 4 ತಿಂಗಳ ಹಿಂದೆ ಒಂದು ಹೇಳಿಕೆ ಕೊಟ್ಟಿದ್ದರು. ಈ ಸರ್ಕಾರದವರಿನ್ನೂ ತೀರ್ಮಾನ ತೆಗೆದುಕೊಂಡಿಲ್ಲ ಎಂದು ಹೇಳುತ್ತಿದ್ದಾರೆ. ಅಂದರೆ ಸರ್ಕಾರದವರಿಗೆ ಈ ವಿಚಾರದಲ್ಲಿ ಒಂದು ತೀರ್ಮಾನವನ್ನು ಬೇಗ ತೆಗೆದುಕೊಳ್ಳದಾರವೆಂದಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ನಾಲ್ಕು ತಿಂಗಳ ಹಿಂದೆ ಕೊಟ್ಟ ಹೇಳಿಕೆಯ ಪ್ರಕಾರ ಅಂದಾಜುಗಳನ್ನು ತಯಾರಿಸಲಾಗುತ್ತಿದೆ. ಎಲ್ಲ ಜಿಲ್ಲೆಗಳ ಅಂದಾಜುಗಳೂ ಈಗ ಸರ್ಕಾರದವರ ಮುಂದೆ ಇವೆ. ಸರ್ಕಾರ ಅವುಗಳನ್ನು ಪರಿಶೀಲನೆ ಮಾಡುತ್ತಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ದೇಶದಾದ್ಯಂತ ತಾವು ತರಿಸಿಕೊಂಡಿರತಕ್ಕ ಅಂಕಿಅಂಶಗಳ ಪ್ರಕಾರ ಸರ್ಕಾರದ ಬೊಕ್ಕಸದಿಂದ ಈ ಯೋಜನೆಗೆ ಎಷ್ಟು ಹಣ ಖರ್ಚಾಗುತ್ತದೆ?

ಶ್ರೀ ಆಲೂರು ಹನುಮಂತಪ್ಪ.—ಆ ರೆಕ್ಕಗಳೆಲ್ಲ ಸರ್ಕಾರದ ಮುಂದಿವೆ; ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಎಂ. ಸಿ. ಬನಪ್ಪ.—ಈ ವಿಚಾರದಲ್ಲಿ ತೀರ್ಮಾನವನ್ನೇ ಇನ್ನೂ ತೆಗೆದುಕೊಂಡಿಲ್ಲ ಎಂದು ಹೇಳಿದಿರಿ, ಹಾಗಿರುವಾಗ ಅಂದಾಜುಗಳನ್ನು ಒಂದು ವೇಳೆ ತಯಾರಿಸಿದ್ದರೂ ಅವುಗಳನ್ನು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ತರಲು ಸಾಧ್ಯ?

ಶ್ರೀ ಆಲೂರು ಹನುಮಂತಪ್ಪ.—ಈ ಸ್ಕೀಮನ್ನು ಕೊಆಪರೇಟೀವ್ ಬೆಸಿಸ್ ಮೇಲೆ ಮಾಡಿದರೆ ಲಾಭದಾಯಕವೇ, ಇಲಾಖೆಯ ಮೂಲಕ ನಡೆಸಿದರೆ ಉತ್ತಮವೇ, ಪಂಪ್ ಸೆಟ್‌ಗಳಿಗೆ, ವಿದ್ಯುಚ್ಛಕ್ತಿ ಇತ್ಯಾದಿ ಬಾಬುಗಳಿಗೆ ಖರ್ಚು ಎಷ್ಟಾಗುತ್ತದೆ; ಇದನ್ನೆಲ್ಲ ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಯೋಜನೆಗೆ ಕೇಂದ್ರ ಸರ್ಕಾರದಿಂದ 14 ಕೋಟಿ ರೂಪಾಯಿಗಳನ್ನು ಕೇಳಿದ್ದೇವೆಂದು ಹೇಳುತ್ತಿದ್ದುದು ಏನಾಯಿತು?

ಶ್ರೀ ಎಸ್. ನಿಜಲಿಂಗಪ್ಪ.—ಇದು ಅಷ್ಟು ಸುಲಭವಾಗಿ ಮಾಡತಕ್ಕ ಕೆಲಸವಲ್ಲ. ಈ ಕೆಲಸವನ್ನು ಜನಗಳೇ ಸೇರಿಕೊಂಡು ಕೊಆಪರೇಟೀವ್ ಬೇಸಿಸ್ ಮೇಲೆ ಮಾಡಿದರೆ ಲಾಭದಾಯಕವಾಗಿರುತ್ತದೆ. ಅದಕ್ಕೆ ಸರ್ಕಾರದವರು ಸಹಾಯ ಬೇಕಾದರೆ ಮಾಡಬಹುದು. ಒಂದು ವೇಳೆ ಸರ್ಕಾರದವರೇ ಈ ಕಾರ್ಯವನ್ನು ಲಾಭ-ನಷ್ಟ ಗಳಿಲ್ಲದಂತೆ ನಡೆಸಲು ಸಾಧ್ಯವೇ ಎಂಬುದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಕೊಆಪರೇಟೀವ್ ಬೇಸಿಸ್ ಮೇಲೆ ನಡೆಸುವುದಾದರೆ ಸರ್ಕಾರದವರು ಸಹಾಯ ನೀಡಲು ಸಿದ್ಧವಾಗಿದ್ದಾರೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಅಂತ್ಯ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಬೆಳಗಾಮಿನಲ್ಲಿ ಈ ಸ್ಕೀಮು ಯಶಸ್ವಿಯಾಗಲ್ಲಿಲ್ಲ ಅನ್ನುವ ಅನುಭವದಿಂದ ಇದನ್ನು ಜನರೇ ನಡೆಸಲಿ ಎಂದು ಹೇಳುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಬೆಳಗಾಂ ಅಲ್ಲ, ಬಿಜಾಪುರದ ವಿಚಾರ ಅವರು ಹೇಳುತ್ತಿದ್ದಾರೆ. ಆ ಅನುಭವವನ್ನೂ ತೆಗೆದುಕೊಂಡಿದೆ.

ಶ್ರೀಮತಿ ನಾಗರತ್ನಮ್ಮ.—ಅಭಾವ ಪ್ರದೇಶದ ಹೆಸರನ್ನು ಹೇಳುತ್ತ ಕೋಲಾರ ಜಿಲ್ಲೆ ಒಂದನ್ನು ಮಾತ್ರ ಹೇಳಲಾಯಿತು. ದೇಶದಲ್ಲಿ ಇಂಥ ಅಭಾವ ಪ್ರದೇಶಗಳೂ ಇನ್ನೂ ಬಹಳವಾಗಿವೆ ಎಂಬ ವಿಚಾರ ಸರ್ಕಾರದವರ ಅವಗಾಹನೆಯಲ್ಲಿದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಈ ಯೋಜನೆಯನ್ನು ದೇಶದಾದ್ಯಂತವೂ ಹರಡಬೇಕೆಂಬುದು ಸರ್ಕಾರದ ಅಭಿಪ್ರಾಯ.

ಶ್ರೀ ಇ. ನಾರಾಯಣಗೌಡ.—ಮೊದಲು ಇದು ಯಶಸ್ವಿಯಾಗುತ್ತದೆಯೇ ಇಲ್ಲವೇ ಎಂಬುದನ್ನು ತಿಳಿಯಲು ಪ್ರಯೋಗಾರ್ಥವಾಗಿ ಕೋಲಾರದಲ್ಲಿ ಇದನ್ನು ಏಕೆ ಮಾಡಬಾರದು?

ಶ್ರೀ ಎಸ್. ನಿಜಲಿಂಗಪ್ಪ.—ಜನರೇ ಪ್ರಯೋಗ ನಡೆಸಲಿ ಎಂಬುದು ಸರ್ಕಾರದ ಅಭಿಪ್ರಾಯ.

ಶ್ರೀ ಕೆ. ಲಕ್ಕಪ್ಪ.—ಸರ್ಕಾರದವರು ಈ ವಿಚಾರದಲ್ಲಿ ಕಾಲಹರಣಮಾಡಿಯೇನೂ ಮಾಡಿಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ಈ ವಿಚಾರದಲ್ಲಿ ಮಾನ್ಯ ಸದಸ್ಯರಿಗೆ ಸಾಕಷ್ಟು ಅನುಭವ ಇಲ್ಲವೆಂದು ಕಾಣುತ್ತದೆ. ಮುಂದೆ ಇದನ್ನು ಯಾವರೀತಿ ಮಾಡಬೇಕು ಎಂಬುದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಆದಷ್ಟೂ ಬೇಗನೆ ಮಾಡಬೇಕೆಂಬುದೇ ಸರ್ಕಾರದ ಉದ್ದೇಶ.

———

1-30 P.M.

Government Industrial Concerns that are working at a loss in the State.

*Q.—281. Sri GANJI VEERAPPA (Harihar).—

Will the Government be pleased to state:—

(*a*) whether there are any Government Industrial Concerns that are working at a loss;

(*b*) if the answer to (*a*) is in affirmative, the names of such concerns that are working at a loss (details of such loss based on the figures for 3 years, 1958-59 to 1961-62 may be given);

(*c*) what steps Government have taken to remedy the same;

(*d*) whether Government would consider setting up of small committees consisting of some experts and also members of the Legislature to go into the matter and submit report suggesting some remedies for the same?

A.—Sri K. MALLAPPA (Minister for Industries and Commerce).—

(*a*) Yes.

(*b*).—

Names of Concerns	Years—(+) Profit (—) Loss			
	1958-59	59-60	60-61	61-62
1 Government Central Workshop, Mercara.	—0.07	—0.02	—0.01	—0.09
2 Government Silk Filatures, Mysore.	—1.38	—4.44	—6.14	—6.73
3 Government Silk Filatures, Kollegal.	+0.10	—2.42	—4.34	—3.26
4 Government Silk Filatures, Kanakapura	—2.37	—1.42	—3.94	—1.34

(*c*) (i) Government Central Workshop, Mercara.

The Workshop is being expanded under the Third Five-Year Plan. A saw mill has now been installed at a cost of 1.32 lakhs. It has been decided to run this saw mill and set up a wood working centre at Kushalnagar as an adjunct to the Workshop at an estimated cost of Rs. 2.50 lakhs, to meet the requirements of packing cases of Government Industrial concerns and others and also to manufacture door and window frames, furniture, etc.